ಅ) ಇತ್ತೀಚಿನ ದಿನದಲ್ಲಿ ಕಾಡಾನೆಗಳು ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ನಾಗರೀಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ವನ್ಯಜೀವಿಗಳಿಗೆ ಬೇಕಾದ ಆಹಾರ ಕಡಿಮೆಯಾಗುತ್ತಿದ್ದು, ಆನೆಗಳಿಗೆ ಬಂಬು ಹಾಗೂ ಇತರೆ ಸಸ್ಯಗಳನ್ನು ಬೆಳಸುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು):

ಅ) ಹೌದು

ಆ) ಆನೆಗಳ ಆವಾಸ ಸ್ಥಾನವನ್ನು ಅಭಿವೃದ್ಧಿ ಪಡಿಸಿ, ನೀರು ಮತ್ತು ಮೇವು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಾಡಿನಲ್ಲಿ ಬಿದಿರು, ನೆಡುತೋಪು ಮತ್ತು ಸಸ್ಯಗಳನ್ನು ಬೆಳಸಲಾಗುತ್ತಿದೆ. ಕ್ಷೀಣಿತ ಅರಣ್ಯ ಪ್ರದೇಶಗಳಲ್ಲಿ ವಿವಿಧ ಯೋಜನೆಗಳಲ್ಲಿ ನೆಡುತೋಪು ರಚನೆ ಮಾಡಿ ಗಿಡಗಳ ಸಂಖ್ಯೆ ಹೆಚ್ಚು ಮಾಡಲಾಗುತ್ತಿದೆ. ಇದಲ್ಲದೆ ಅರಣ್ಯ ಪ್ರದೇಶಗಳಲ್ಲಿ ಸಾಕಷ್ಟು ನೀರು ಸಂಗ್ರಹಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಅದರಲ್ಲೂ ಮುಖ್ಯವಾಗಿ ಚೆಕ್‌ಡ್ಯಾಮ್, ಪರ್‌ಕ್ಯೂಲೇಷನ್ ಟ್ಯಾಂಕ್, ನಾಲಾಬಂದ್ ನಿರ್ಮಾಣ ಮಾಡಲಾಗುತ್ತಿದ್ದು, ಒಟ್ಟಾರೆ ಹಸಿರು ಪ್ರದೇಶದ ಪ್ರಮಾಣ ಹೆಚ್ಚು ಮಾಡಲಾಗುತ್ತಿದೆ.

ಅಂತರಿಕ್ಷ ಸಂಸ್ಥೆ (NRSA) ವರದಿ

11 (43) ಶ್ರೀ ಮುನಿಯಪ್ಪ. ವಿ. (ಶಿಡ್ಲಘಟ್ಟ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ಪರಮಶಿವಯ್ಯ ವರದಿ ಆಧರಿಸಿ ಹೈದರಾಬಾದ್ ಎನ್.ಆರ್.ಎಸ್.ಎ. (ಅಂತರಿಕ್ಷ ಸಂಸ್ಥೆಗೆ) ಸಮೀಕ್ಷೆ ಮಾಡಲು ರಾಜ್ಯ ಸರ್ಕಾರಕ್ಕೆ ವಹಿಸಿಕೊಟ್ಟಿದ್ದು, ಸದರಿ ಸಂಸ್ಥೆಯು ನೀಡಿರುವ ವರದಿಯ ವಿವರವೇನು;

ಆ) ಆ ಸಂಸ್ಥೆ ಕೊಟ್ಟಿರುವ ವರದಿ ತಾಂತ್ರಿಕವಾಗಿ ಅದರ ಸಾಧಕ – ಬಾಧಕಗಳ ಬಗ್ಗೆ ಅಧ್ಯಯನ ನಡೆಸಲು ತಾಂತ್ರಿಕ ತಜ್ಞರ ನೇಮಕ ಆಗಿದೆಯೇ; ಹಾಗಿದ್ದಲ್ಲಿ ತಾಂತ್ರಿಕ ತಜ್ಞರ ವರದಿ ವಿವರ ನೀಡುವುದು;

ಇ) ಈ ವರದಿ ಆಧರಿಸಿ ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ; ಬರಗಾಲ ಪೀಡಿತ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ನೀರು ಒದಗಿಸಲು ಸರ್ಕಾರ ಉದ್ದೇಶಿಸಿರುವ ಕ್ರಮಗಳೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು):

ಅ) ಶ್ರೀ ಜಿ.ಎಸ್. ಪರಮಶಿವಯ್ಯನವರ ವರದಿಯಲ್ಲಿರುವಂತೆ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆ (ALTM-Airborne Laser Terrain Mapping) ಕೈಗೊಂಡಿತು, ಮೆ: ಎನ್.ಆರ್.ಎಸ್..ಸಿ. ಸಂಸ್ಥೆ, ಹೈದರಾಬಾದ್ ಇವರು 1ಮೀ. ಹಾಗೂ 5ಮೀ.ನ Contour Interval ಇರುವ ನಕ್ಷೆಗಳನ್ನು DEM (Digital Elevation Model), Orthophotosಗಳ ಸಾಫ್ಟ್ ಪ್ರತಿಗಳನ್ನು ನೀಡಿರುತ್ತಾರೆ.

ಆ) ಎನ್.ಆರ್.ಎಸ್.ಎ. ಸಂಸ್ಥೆಯು ಕೇವಲ ಸರ್ವೆ ಸಮೀಕ್ಷೆಯ ಮಾಹಿತಿ ಮಾತ್ರ ನೀಡಿರುತ್ತದೆ. ಯೋಜನೆಯ ಸೇವಾ ಕಾಲುವೆ ಸರ್ವೆ ಕಾರ್ಯವನ್ನು ಮೆ: ಎನ್.ಆರ್.ಎಸ್.ಸಿ. ಸಂಸ್ಥೆಯು ಮಾಡಿರುವುದಿಲ್ಲ. ಸೇವಾ ಕಾಲುವೆ ಸರ್ವೆ, ಸಮೀಕ್ಷೆಯನ್ನು ಕೈಗೊಳ್ಳಲು ಮತ್ತು ಈ ಸರ್ವೆ, ಸಮೀಕ್ಷೆ ಮಾಹಿತಿಯನ್ನು ಉಪಯೋಗಿಸಿ, ಯೋಜನೆಯ ವಿವರವಾದ ವರದಿ (Detailed Project Report-DPR)ಯನ್ನು ತಯಾರಿಸಲು ಟೆಂಡರ್ ಕರೆಯಲಾಗಿದೆ. ಯೋಜನೆಯ DPR ತಯಾರಾದ ಮೇಲೆ ಯೋಜನೆ ಪ್ರದೇಶದ ಸಂಪೂರ್ಣ ಮಾಹಿತಿ ಲಭ್ಯವಾಗುವುದರಿಂದ ಯೋಜನೆಯ ಸಾಧಕ – ಬಾಧಕಗಳ ಬಗ್ಗೆ ಅಧ್ಯಯನ ಮಾಡಲು ಸಾಧ್ಯವಾಗುವುದು. ನಂತರ ಈ ಕುರಿತ ಅಧ್ಯಯನ ನಡೆಸಲು ತಾಂತ್ರಿಕ ತಜ್ಞರ ಸಮಿತಿ ನೇಮಿಸಲಾಗುವುದು.

ಇ) ಮೆ: ಎನ್.ಆರ್.ಎಸ್.ಸಿ. ಸಂಸ್ಥೆ, ಹೈದರಾಬಾದ್ ಇವರು ನೀಡಿರುವ ಮಾಹಿತಿಗಳನ್ನಾಧರಿಸಿ, ವಿವರವಾದ ಯೋಜನಾ ವರದಿಯ ಮಾಹಿತಿಗಳನ್ನಾಧರಿಸಿ, ವಿವರವಾದ ಯೋಜನಾ ವರದಿಯ ತಯಾರಿಕೆಗೆ ಟೆಂಡರ್ ಕರೆಯಲಾಗಿದೆ. ವಿವರವಾದ ಯೋಜನಾ ವರದಿ ತಯಾರಾದ ಮೇಲೆ ಯೋಜನೆಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.

ಹನೂರು ಪಟ್ಟಣದಲ್ಲಿ ಐ.ಟಿ.ಐ. ಕಾಲೇಜು ತೆರೆದಿರುವುದು.

12 (6) ಶ್ರೀ ನರೇಂದ್ರ. ಆರ್. (ಹನೂರು): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕು ಹನೂರು ಪಟ್ಟಣವು ಅತಿ ಹೆಚ್ಚು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಜನಾಂಗವನ್ನು ಹೊಂದಿದ್ದು, ಇಲ್ಲಿನ ವಿದ್ಯಾರ್ಥಿಗಳು ಐ.ಟಿ.ಐ. ತರಬೇತಿ ಪಡೆಯಲು ಯಾವುದೇ ಐ.ಟಿ.ಐ. ಕಾಲೇಜು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;